ತುರುವೇಕೆರೆಯಲ್ಲಿ ಮಿನಿ ವಿಧಾನ ಸೌಧ

805 - ಶ್ರೀ ಹೆಚ್.ಜಿ. ನಂಜೇಗೌಡ (ತುರುವೇಕೆರೆ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುರುವೇಕೆರೆ ತಾಲ್ಲೂಕು ಕಛೇರಿಯು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈಗಾಗಲೇ ಮಂಜೂರಾಗಿರುವ ಮಿನಿ ವಿಧಾನ ಸೌಧ ಕಾಮಗಾರಿಯು ಯಾವಾಗ ಪೂರ್ಣಗೊಳ್ಳುವುದು?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಮಾರ್ಚ್ 1999 ರೊಳಗೆ ಕಟ್ಟಡವನ್ನು ಪೂರ್ಣಗೊಳಿಸಲಾಗುತ್ತದೆ.

ಉಡುಪಿ ಜಿಲ್ಲೆಯಲ್ಲಿ ಮೀನುಗಾರಿಕೆ ರಸ್ತೆಗಳ ಸುಧಾರಣೆ

806 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಳೆದ ಮೂರು ವರ್ಷಗಳಿಂದ ಉಡುಪಿ ಜಿಲ್ಲೆಯಲ್ಲಿ ಮೀನುಗಾರಿಕಾ ಇಲಾಖೆಯಿಂದ ಮೀನುಗಾರಿಕಾ ರಸ್ತೆಗಳ ಸುಧಾರಣೆಗಾಗಿ ಕಾದಿರಿಸಿದ ಅನುದಾನ ಎಷ್ಟು? (ಕ್ಷೇತ್ರವಾರು ವಿವರ ನೀಡುವುದು)*

ಆ) *1998-99 ಸಾಲಿನಲ್ಲಿ ಯಾವ ಯಾವ ಮೀನುಗಾರಿಕೆ ರಸ್ತೆಗಳಿಗೆ ಎಷ್ಟೆಷ್ಟು ಅನುದಾನವನ್ನು ಕಾದಿರಿಸಲಾಗಿದೆ. (ಕ್ಷೇತ್ರವಾರು ವಿವರ ನೀಡುವುದು)*

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಉಡುಪಿ ಜಿಲ್ಲೆಯು 25.8.97ರಂದು ಅಸ್ತಿತ್ವಕ್ಕೆ ಬಂದಿರುವುದು

1995-96ರಲ್ಲಿ	ರೂ. 20.73 ಲಕ್ಷ
1996-97ರಲ್ಲಿ	ರೂ. 19.37 ಲಕ್ಷ
1997-98 ರಲ್ಲಿ	ರೂ. 14.15 ಲಕ್ಷಗಳನ್ನು

ಉಡುಪಿ ಜಿಲ್ಲೆಯ ಮೀನುಗಾರಿಕಾ ರಸ್ತೆಗಳ ನಿರ್ಮಾಣ ಹಾಗೂ ನಿರ್ವಹಣೆಗೆ ಖರ್ಚು ಮಾಡಲಾಗಿದೆ.